ಏನು ಬೇಕಾದರೂ ಆಗಬಹುದು. ನೀವು ನನಗೆ ಏನು ರಕ್ಷಣೆ ಕೊಟ್ಟಿದ್ದೀರಿ? ಈ ಕ್ಷಣದಲ್ಲಿ ಈ ಸದನದಲ್ಲಿ ಅವನನ್ನು ಸಸ್ಪೆಂಡ್ ಮಾಡುತ್ತೇವೆಂದು ಹೇಳಬೇಕು. ಇದನ್ನು ಯಾವ ಕಾರಣಕ್ಕೂ ಬಿಡುವುದಕ್ಕೆ ಸಾಧ್ಯವಿಲ್ಲ. ಇದೇನು ಹುಡುಗಾಟವೇ?

ಶ್ರೀ ಎಂ. ಶ್ರೀನಿವಾಸ್ :- ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುವುದು ಅಲ್ಲ. ಇದು ಬಹಳ ಮಹತ್ವದ ಪ್ರಶ್ನೆ. ಒಬ್ಬ ಶಾಸಕರನ್ನು ಮುಗಿಸುತ್ತೇನೆಂದು ಹೇಳುವ ಆ ಅಧಿಕಾರಿಯನ್ನು ಈಗಲೇ ಸಸ್ಪೆಂಡ್ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ :- ನಾವು ಧರಣಿ ಮಾಡುತ್ತೇವೆ.

(ಶ್ರೀ ವಾಟಾಳ್ ನಾಗರಾಜ್‌ರವರು ಧರಣಿಗೆ ಬಂದರು)

(ಗೊಂದಲ)

ಶ್ರೀ ಜಿ. ವಿ. ಶ್ರೀರಾಮ ರೆಡ್ಡಿ :- ಒಬ್ಬ ಶಾಸಕರ ಮಾತನ್ನು ನಂಬುವುದಿಲ್ಲವೆಂದರೆ ಇನ್ನು ಯಾರ ಮಾತನ್ನು ನಂಬುತ್ತೀರಿ? ಆದಾದರೂ ಗೊತ್ತಾಗಲಿ ನಮಗೆ.

ಉಪಾಧ್ಯಕ್ಷರು :- ತಾವು ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಸಿಂಧ್ಯ ಅವರು ಸರ್ಕಾರದ ಪರವಾಗಿ ಉತ್ತರ ಹೇಳುತ್ತಾರೆ ಕೇಳಿ.

(ಗೊಂದಲ)

(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರೆಲ್ಲರೂ ಧರಣಿಗಿಳಿದರು)

ಶ್ರೀ ಹೆಚ್. ಡಿ. ಬಸವರಾಜ್ :- ಅಧಿಕಾರಿಗಳು ಶಾಸಕರನ್ನು ಇಷ್ಟು ಕೀಳು ಮಟ್ಟದಲ್ಲಿ ನಡೆಸಿಕೊಳ್ಳುತ್ತಿದ್ದಾರೆಂದರೆ ಇದರ ಅರ್ಥವೇನು? ಈ ತಿಂಗಳ ಎರಡನೇ ತಾರೀಖು ಕಾರ್ಯನಿರ್ವಾಹಕ ಅಧಿಕಾರಿಗಳು ಶಾಸಕರನ್ನು ನಾನು ನೋಡುವುದಿಲ್ಲ, ಅವರು ಏನು ಮಾಡಿಕೊಳ್ಳುತ್ತಾರೆ ಮಾಡಿಕೊಳ್ಳಲಿ ಎಂದು ಹೇಳಿದ್ದಾರೆ ನಾನು ಹೇಳಿ ಕಳುಹಿಸಿದರೂ ಅವರು ಬರಲಿಲ್ಲ. 20 ಅಂಶಗಳ ಕಾರ್ಯಕ್ರಮಕ್ಕೆ ನಾನು ಅಧ್ಯಕ್ಷ ನಾಗಿದ್ದೇನೆ, ಅವರು ಕಾರ್ಯದರ್ಶಿಯಾಗಿದ್ದಾರೆ. 20 ಅಂಶಗಳ ಕಾರ್ಯಕ್ರಮದ ಬಗ್ಗೆ ನಾನು ಚರ್ಚೆ ಮಾಡಬೇಕೆಂದು ಹೇಳಿದರೂ ಅವರು ಬರುತ್ತಿಲ್ಲ. ಇಷ್ಟರಮಟ್ಟಿಗೆ ಉದ್ದಟತನಕ್ಕೆ ಯಾರು ಪ್ರಚೋದನೆ ಮಾಡಿತ್ತಿದ್ದಾರೆಂದು ನನಗೆ ಗೊತ್ತಿಲ್ಲ. ಈ ಉದ್ದಟತನಕ್ಕೆ ಅಂಕಿತ ಹಾಕಲೇಬೇಕಾಗಿದೆ. ಇಲ್ಲದಿದ್ದರೆ ನಾವು ಈ ಶಾಸನಸಭೆಯಲ್ಲಿ ಶಾಸಕರಾಗಿ ಸರ್ಕಾರದ ಯಾವ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನೀವು ಅವರ ಬಗ್ಗೆ ಎಲ್ಲಿಯವರೆಗೆ ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಅಲ್ಲಿಯವರೆಗೆ ನಾವು ಧರಣಿ ಮಾಡುತ್ತೇವೆ.

ಉಪಾಧ್ಯಕ್ಷರು :- ತಾವು ಕುಳಿತುಕೊಳ್ಳಿ. ಸಿಂಧ್ಯ ಅವರೆ ತಾವು ಮಾತನಾಡಿ.